ಮಾಡಿದವರ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡು ಶಿಕ್ಷೆಗೆ ಒಳಪಡಿಸುವುದು ಪೊಲೀಸ್‌ನವರು ಕೆಲಸ. ತೆರಿಗೆ ವಸೂಲಿ ಮಾಡತಕ್ಕ ಕೆಲಸ ನಮ್ಮದು. ತೆರಿಗೆ ಕೊಡದೇನೇ ಕಾಪಿರೈಟ್ ಇಲ್ಲದೇನೇ ಮಾಡತಕ್ಕದ್ದು. ಕಾನೂನು ಬಾಹಿರವಾಗಿ ಮಾಡತಕ್ಕದಕ್ಕೆ ನಮ್ಮ ಇಂಟಲಿಜೆನ್ಸ್ ಮೂಲಕ ಏನು ಮಾಡಬೇಕೊ ಅದನ್ನೆಲ್ಲ ಮಾಡುತ್ತಿದ್ದೇವೆ. ಆದರೂ ಕೂಡ ಈ ಹಾವಳಿ ಹೆಚ್ಚಾಗಿದೆ ಎಂಬುದು ನಿಜ. ಅದಕೋಸ್ಕರ ಈ ಸಲ ಬಜೆಟ್ ಭಾಷಣದಲ್ಲಿ ಗುಂಡಾ ಆಕ್ಟ್‌ಗೆ ತಿದ್ದುಪಡಿ ತರಬೇಕು. ತಮಿಳುನಾಡಿನಲ್ಲೇನು ಮಾಡಿದ್ದಾರೆ ಅದೇ ರೀತಿ ಇಲ್ಲೂ ಕೂಡ ತಿದ್ದುಪಡಿ ಮಾಡಬೇಕೆಂದು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ತಿದ್ದುಪಡಿ ತಂದು ಕಾನೂನನ್ನು ಭದ್ರಪಡಿಸಿ ಅವರಿಗೆ ಕಾನೂನಿನ ಚೌಕಟ್ಟಿನಲ್ಲಿ ಶಿಕ್ಷೆಗೆ ಒಳಪಡಿಸುವುದಕ್ಕೆ ಆ ಅಪರಾಧವನ್ನು ತಡೆಗಟ್ಟಲು ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ಈಗಾಗಲೇ ನಾವು ಅದರ ಬಗ್ಗೆ ಚಿಂತನೆ ಮಾಡಿದ್ದೇವೆ.

ಅಧ್ಯಕ್ಷರು:– ಶ್ರೀ ನಿರ್ಮಲ ಸುರಾನಾರವರು ಗೈರು ಹಾಜರಾಗಿದ್ದರು. ಪ್ರಶ್ನೋತ್ತರ ವೇಳೆ ಮುಗಿದಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಇ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಹಾಗೂ ಉತ್ತರಗಳು (ಅನುಬಂಧ–1)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು):– ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 15ನೇ ಪಟ್ಟಿಯಲ್ಲಿರುವ 188 ಪ್ರಶ್ನೆಗಳ ಪೈಕಿ 156 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರವನ್ನು ಸಭೆಯ ಮುಂದಿಡುತ್ತೇನೆ. (ಅನುಬಂಧ–1)

ಅಧ್ಯಕ್ಷರು:– ಮಂಡಿಸಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ರಾಜ್ಯದಲ್ಲಿ ಪಡಿತರ ಚೀಟಿಗಳ ಸಮೀಕ್ಷೆ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): – ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಯವರು ಇರುವುದರಿಂದ ಈ ಸದನದ ಎಲ್ಲಾ ಸದಸ್ಯರಿಗೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ನಿಲುವಳಿ ಸೂಚನೆಯ ಮೂಲಕ ನಾನು ಪ್ರಸ್ತಾಪ ಮಾಡಿದ್ದೇನೆ. ಯಾವ ಸೂಚನೆ ಎಂಬುದು ಮುಖ್ಯವಲ್ಲ. ಯಾವ ರೂಲ್ ಅಡಿಯಲ್ಲಿ ತೆಗೆದುಕೊಳ್ಳಬೇಕು ಎಂಬುದು ಮುಖ್ಯವಲ್ಲ. ಈ ಸರ್ಕಾರಕ್ಕೆ ಇಲ್ಲಿರುವಂಥ 224 ಜನ ಶಾಸಕರಿಗೆ, ರಾಜ್ಯದ ಜನತೆಗೆ ಅನ್ಯಾಯವಾಗಬಾರದು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಗೌರವ ಸಿಗಬೇಕು. ಆ ರೀತಿ ಪ್ರಮುಖವಾದ ವಿಷಯ. ಪಡಿತರ ಚೀಟಿಯ ಸಮೀಕ್ಷೆ ಒಂದು ತಿಂಗಳ ಕಾಲ ನಾಳೆ ಇಲ್ಲವೆ ನಾಡಿದ್ದರಿಂದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಮಾಡಬೇಕೆಂದು ತಾವು ತೀರ್ಮಾನ ಮಾಡಿದ್ದೀರಿ. ಕಳೆದ ಒಂದು ವರ್ಷದಲ್ಲಿ ತಾವು ಎರಡು ಬಾರಿ ಈಗಾಗಲೇ ಸಮೀಕ್ಷೆಯನ್ನು ಮಾಡಿದ್ದೀರಿ. ಎಲ್ಲೊ ಒಂದು ಕಡೆ ಸರ್ಕಾರದ ಮನಸ್ಸಿನಲ್ಲಿ ಪಡಿತರ ವ್ಯವಸ್ಥೆಯೊಳಗೆ ಸಿಗುತ್ತಿರುವ